**ಅಸಲು ದಾವಾ ನಂ:63/2014**
**ಪಿ.ಡಬ್ಲ್ಯೂ- 01**

**ದಿನಾಂಕ:15.09.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಆರ್.ಎ., 2 ನೇಪ್ರತಿವಾದಿ ಪರ ವಕೀಲರಿಂದ**

35. ಸಾಕ್ಷಿಗೆ ಒಂದು ಛಾಯ ಚಿತ್ರವನ್ನು ತೋರಿಸಿ ಅದರಲ್ಲಿ ಕಾಣಿಸುವ ಮನೆ ದಾವಾ ಆಸ್ತಿಯಲ್ಲಿ ಇರುತ್ತದೆಯೋ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಸದರಿ ಛಾಯ ಚಿತ್ರವನ್ನು ನೋಡಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಆಗಾದರೆ ಸದರಿ ಛಾಯ ಚಿತ್ರದಲ್ಲಿ ಕಾಣಿಸುವ ಮನೆ ಯಾರಿಗೆ ಸೇರಿರುತ್ತದೆ ಅಂತ ಹೇಳಬಹುದಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದಿರಿ ಛಾಯ ಚಿತ್ರದಲ್ಲಿ ಕಾಣಿಸುವ ಮನೆ ದಾವಾ ಆಸ್ತಿಯಲ್ಲಿ ಬರುತ್ತದೆಯೋ ಅಥವಾ ಇಲ್ಲವೋ ಅಂತ ಖಚಿತ ಪಡಿಸಿಕೊಳ್ಳಲು ನ್ಯಾಯಾಲಯದಿಂದ ನಿಯೋಗಿಯನ್ನು ನೇಮಿಸಿದರೆ ನನಗೆ ಯಾವುದೇ ತೊಂದರೆ ಇರುವುದಿಲ್ಲ.

36. 2 ನೇ ಪ್ರತಿವಾದಿ ಏನು ಪರಿಹಾರ ಕೇಳಿ ಪ್ರತಿದಾವೆ ಸಲ್ಲಿಸಿರುತ್ತಾನೆ ಅಂತ ನಾನು ತಿಳಿದುಕೊಂಡಿರುವುದಿಲ್ಲ. 2 ನೇ ಪ್ರತಿವಾದಿ ಪ್ರತಿದಾವಾದಲ್ಲಿ ಯಾವ ಸ್ವತ್ತನ್ನು ಸೇರಿಸಿರುತ್ತಾನೆ ಅಂತ ನನಗೆ ಗೊತ್ತಿಲ್ಲ. ಪ್ರತಿದಾವೆಗೆ ನಾನೇನಾದರೂ ತಕರಾರನ್ನು ಸಲ್ಲಿಸಿರುತ್ತೀನಾ ಎಂದರೆ ಸಾಕ್ಷಿಯು ಕೇಸ್ ಹಾಕಿರುತ್ತೇನೆ ಎಂದು ನುಡಿಯುತ್ತಾರೆ. ಆಗಾದರೆ ನಾನು ಪ್ರತಿದಾವೆಗೆ ತಕರಾರನ್ನು ಸಲ್ಲಿಸಿರುವುದಿಲ್ಲ ಅಂತ ಹೇಳುತ್ತೇನಾ ಎಂದರೆ ಸಾಕ್ಷಿಯು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಏನಂತ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ಪಹಣಿ, ಪಟ್ಟ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ತಕರಾರಿನಲ್ಲಿ ಏನೆಲ್ಲ ಬರೆದಿರುತ್ತದೆ ಅಂತ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ದಾಖಲೆಗಳನ್ನು ಮಾತ್ರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

37. ನಾನು ದಿನಾಂಕ.16.06.2016 ಮತ್ತು 11.04.2022 ರಂದು ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯನ್ನು ಸಲ್ಲಿಸಿದ್ದು, ಸದರಿ ಮುಖ್ಯ ವಿಚಾರಣೆಯಲ್ಲಿ 2 ನೇ ಪ್ರತಿವಾದಿ ವಿರುದ್ದ ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸಾಕ್ಷಿಯು 2014 ರಲ್ಲಿ ಕೇಸ್ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಸಹೋದರ 2 ನೇ ವಾದಿ ಶಿವಮೂರ್ತಿಯನ್ನು ಕರೆದುಕೊಂಡು ಬಂದು ಈ ದಾವೆಯಲ್ಲಿ ಸಾಕ್ಷ್ಯ ನುಡಿಸಲು ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ನಾನು ಒಬ್ಬನೇ ಸಾಕು ಎಂದು ನುಡಿಯುತ್ತಾರೆ. ನನ್ನ ಸಹೋದರ ಶಿವಮೂರ್ತಿ ಕಡೆಯಿಂದ ಅವನ ಪರವಾಗಿ ಸಾಕ್ಷ್ಯ ನುಡಿಯಲು ನಾನು ಅಧಿಕಾರ ಪತ್ರವನ್ನು ತೆಗೆದುಕೊಂಡಿರುವುದಿಲ್ಲ. ನನ್ನ ಸಹೋದರ ಶಿವಮೂರ್ತಿಯನ್ನು ಕರೆಸಿ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿಸಿದರೆ ನಿಜವಾದ ಬಣ್ಣ ಬಯಲಾಗುತ್ತದೆ ಅಂತ ನ್ಯಾಯಾಲಯಕ್ಕೆ ಕರೆಸಿರುವುದಿಲ್ಲ ಎಂದರೆ ಸರಿಯಲ್ಲ.

38. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಸಾಕ್ಷಿ ಪಟ್ಟಿಯಲ್ಲಿ ಇರುವ ಸಾಕ್ಷಿದಾರರ ಹೆಸರುಗಳನ್ನು ಹೇಳಬಹುದಾ ಎಂದರೆ ಸಾಕ್ಷಿಯು ಉಮಾಪತಿ, ರಂಗಪ್ಪ ಮತ್ತು ಇನ್ನೊಬ್ಬ ರಂಗಪ್ಪ ಎಂದು ನುಡಿಯುತ್ತಾರೆ. ನಾನು ಅವರನ್ನು ಕರೆಸಿ ಸಾಕ್ಷ್ಯ ನುಡಿಸುತ್ತಿದ್ದೇನೆ ಎಂದರೆ ಸಾಕ್ಷಿಯು ಹೊಡೆದಾಟ, ಬಡೆದಾಟ, ಕಚ್ಚಾಟ ಅದನ್ನು ನೋಡಿ ಅವರು ಬಂದು ಸಾಕ್ಷ್ಯ ನುಡಿಯುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಮೂರು ಜನ ಸಾಕ್ಷಿದಾರರು ಏನಂತ ಪ್ರಮಾಣ ಪತ್ರ ಸಲ್ಲಿಸಿರುತ್ತಾರೆ ಅಂತ ನಾನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. 2ನೇ ಪ್ರತಿವಾದಿ ಕೇಳಿರುವ ಪರಿಹಾರವನ್ನು ಡಿಕ್ರಿ ಮಾಡಿದರೆ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸಾಕ್ಷಿಯು ಏನಂತ ಪ್ರಶ್ನಿಸುತ್ತಾರೆ ಆಗ ಸಾಕ್ಷಿಗೆ ಈಗಾಗಲೇ ಈ ಹಿಂದೆ ತೋರಿಸಿದ ಛಾಯ ಚಿತ್ರವನ್ನು ತೋರಿಸಿ, ಸದರಿ ಛಾಯ ಚಿತ್ರದಲ್ಲಿ ಕಾಣಿಸುವ ಮನೆ ನಮ್ಮ ಜಮೀನಿನಲ್ಲಿ ಇಲ್ಲದಿರುವುದರಿಂದ 2ನೇ ಪ್ರತಿವಾದಿಯ ಪ್ರತಿದಾವೆ ಡಿಕ್ರಿಯಾದರೆ ನನಗೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿ ಎಂದು ಉತ್ತರಿಸುತ್ತಾರೆ.

39. ದಾವಾ ಆಸ್ತಿಗೆ ಸಂಬಂಧಿಸಿದಂತೆ ಈ ಹಿಂದೆ ನನ್ನ ವಿರುದ್ಧ ಯಾವುದೇ ವ್ಯಾಜ್ಯಗಳು ನಡೆದಿರುವುದಿಲ್ಲ. ನಾನು ಈ ಹಿಂದೆ ಸಲ್ಲಿಸಿದಂತಹ ದಾವೆಗಳಲ್ಲಿ ಮತ್ತು ನನ್ನ ವಿರುದ್ದ ಸಲ್ಲಿಸಿದ ದಾವೆಗಳಲ್ಲಿ ರಾಜೀ ಮಾಡಿಕೊಂಡು ಅವರಿಂದ ಹಣತೆಗೆದುಕೊಂಡಿದ್ದು, ಅದೇ ರೀತಿ ಈ ದಾವೆಯನ್ನು ಸಲ್ಲಿಸಿ, ಈ ದಾವೆಯಲ್ಲಿಯೂ ಹಣ ತೆಗೆದುಕೊಳ್ಳುವ ಉದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ದಾವೆಗಳನ್ನು ಸಲ್ಲಿಸಿ ಹಣ ತೆಗೆದುಕೊಳ್ಳುವ ಪ್ರವೃತ್ತಿಯನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.